


# ಈ ಟ್ಯುಟೋರಿಯಲ್ ನಲ್ಲಿ ನೀವು ಉಷಾ ಜಾನೋಮೆ ಗ್ಯಾದರಿಂಗ್ ಫುಟ್ ಅನ್ನು ಬಳಸಿಕೊಂಡು ಸೊಗಸಾದ ಸ್ಟೋಲ್ ಒಂದನ್ನು ಮಾಡಲು ಕಲಿಯುವಿರಿ.



ಕೇವಲ ಕೆಲವು ಗ್ಯಾದರ್ ಗಳನ್ನು ಸೇರಿಸುವ ಮೂಲಕ, ನೀವು ನಿಮ್ಮ ಹಳೆಯ ಡುಪಾಟ್ಟ ಅಥವಾ ಸ್ಟೋಲಿಗೂ ಸಹ ಸೊಗಸಾದ ಸ್ಟೈಲೊಂದನ್ನು ನೀಡಬಹುದು. ಗ್ಯಾದರಿಂಗ್ ಫೂಟ್ ಅನ್ನು ಹೇಗೆ ಬಳಸಬೇಕೆಂಬುದನ್ನು ಸರಿಯಾಗಿ ತಿಳಿದುಕೊಳ್ಳಲು, ನೀವು ಈಗಾಗಲೇ ನೋಡಿಲ್ಲವಾದರೆ, ನಮ್ಮ ಗ್ಯಾದರಿಂಗ್ ಫುಟ್ ಟ್ಯುಟೋರಿಯಲ್ ವೀಡಿಯೊವನ್ನು ನೋಡಿ. ಹೇಗಾದರೂ, ನಿಮಗೆ ಸ್ವಲ್ಪ ಮೂಲಭೂತ ಹೊಲಿಗೆ ತಿಳಿದಿದ್ದರೆ, ನೀವು ನೇರವಾಗಿ ಇದನನ್ನು ಮಾಡಬಹುದು.

ನಿಮಗೆ ಒಂದು ಉಷಾ ಜಾನೋಮೆ ಗ್ಯಾದರಿಂಗ್ ಫುಟ್ ಬೇಕು, 140 x 15 ಇಂಚುಗಳಿರುವ ಬಟ್ಟೆಯ ತುಂಡು ಅಥವಾ ನಿಮ್ಮ ಬಳಿಯೇ ಇರುವ ಒಂದು ಹಳೆಯ ಸ್ಟೋಲ್, ದಾರಗಳು, ಅಳತೆ ಪಟ್ಟಿ ಮತ್ತು ಮಾರ್ಕರ್. ನೀವು ಬೇಕಾದರೆ ನಿಮ್ಮ ಬಳಿಯಿರುವ ಒಂದು ಹಳೆಯ ದುಪಟ್ಟಾವನ್ನು ಅದರ ಉದ್ದವನ್ನು ಕತ್ತರಿಸುವ ಮೂಲಕ ಸಹ ಬಳಸಬಹುದು, ಮತ್ತು ನೀವು ಈ ರೀತಿ ಮಾಡುವುದಾದರೆ ನೀವು ಕತ್ತರಿಸಿದ ಅಂಚನ್ನೂ ಹೊಲಿಯಬೇಕಾಗುತ್ತದೆ. ಅದೊಂದು ಬಹಳ ದಪ್ಪವಾದ ಅಥವಾ ಭಾರವಾದ ಬಟ್ಟೆಯಲ್ಲ ಎಂದು ಖಚಿತಪಡಿಸಿಕೊಳ್ಳಿ.

ಬಟ್ಟೆಯನ್ನು ಝಿಗ್-ಝಾಗ್ ಮಡಕೆಗಳ ರೀತಿಯಲ್ಲಿ ಹೇಗೆ ಮಡಚಲಾಗುತ್ತಿದೆ ಎಂಬುದನ್ನು ನೋಡಿ. ಈಗ ನಾನು ಮಡಚಿದ ಬಟ್ಟೆಯ ತುಂಡಿನ ಮೇಲೆ ಅಂಚಿನಿಂದ ಪ್ರಾರಂಭಿಸಿ, ಪ್ರತಿ 3 ಅಂಗುಲಗಳ ನಂತರ ಗುರುತುಗಳನ್ನು ಹೇಗೆ ಮಾಡುತ್ತಿದ್ದೇನೆ ಎಂಬುದನ್ನು ನೋಡಿ.

ಅವುಗಳ ನಡುವೆ 3 ಅಂಗುಲಗಳ ಅಂತರವನ್ನು ಬಿಟ್ಟು ಅದೇ ರೀತಿಯ ಗುರುತುಗಳನ್ನು ಮಾಡಲು ಮಡಿಕೆಗಳನ್ನು ಎಳೆಯಿರಿ.
ಬಟ್ಟೆಯನ್ನು ತೆರೆಯುತ್ತಾ ಹೋಗಿ ಮತ್ತು ನೀವು ಕೊನೆಯನ್ನು ತಲುಪುವವರೆಗೆ ಪ್ರಕ್ರಿಯೆಯನ್ನು ಪುನರಾವರ್ತಿಸಿ.

ಅಳತೆ ಪಟ್ಟಿಯ ಸಹಾಯದಿಂದ ಈ ರೀತಿಯಲ್ಲಿ ಬಟ್ಟೆಯ ಉದ್ದಕ್ಕೂ ಗುರುತುಗಳನ್ನು ಈಗ ಸೇರಿಸುತ್ತಾ ಹೋಗಿ.
ಎಲ್ಲಾ ಗುರುತುಗಳಿಗೂ ಇದೇ ರೀತಿ ಮಾಡಿ.

ಮೇಲಿನಿಂದ ಕೆಳಕ್ಕೆ 4 ಲಂಬ ಸಾಲುಗಳು ಬರುವವರೆಗೆ ಇದನ್ನು ಮುಂದುವರಿಸಿ.



ಗ್ಯಾದರಿಂಗ್ ಫೂಟ್ನೊಂದಿಗೆ ನಾವು ಸ್ಟಿಚ್ ಮಾಡುವ ಸಾಲುಗಳು ಇವು ಆಗಿರುತ್ತವೆ. ಇದನ್ನು ಮಾಡಲು ನಾವು ಮೊದಲು ನಾರ್ಮಲ್ ಪ್ರೆಸ್ಸರ್ ಫುಟ್ ಅನ್ನು ಗ್ಯಾದರಿಂಗ್ ಫುಟ್ ನೊಂದಿಗೆ ಬದಲಾಯಿಸಬೇಕು.

ಈ ರೀತಿಯಲ್ಲಿ ನಾರ್ಮಲ್ ಪ್ರೆಸ್ಸರ್ ಫುಟ್ ಅನ್ನು ತೆಗೆಯಲು ಸ್ಕ್ರೂ ಅನ್ನು ತಿರುಗಿಸಿ, ಪ್ರೆಸ್ಸರ್ ಅನ್ನು ಮೇಲಕ್ಕೆತ್ತಿ ಮತ್ತು ಫುಟ್ ಅನ್ನು ತೆಗೆಯಿರಿ. ಗ್ಯಾದರಿಂಗ್ ಫುಟ್ ಅನ್ನು ತೆಗೆದುಕೊಂಡು, ಸ್ಕ್ರೂನಿಂದ ಅದನ್ನು ಒಗ್ಗೂಡಿಸಿ, ಪ್ರೆಸ್ಸರ್ ಅನ್ನು ಕೆಳಕ್ಕೆ ಮಾಡಿ ಸ್ಕ್ರೂಅನ್ನು ಗಟ್ಟಿಯಾಗಿ ತಿರುಗಿಸಿ.

ನಿಮ್ಮ ಬಟ್ಟೆಯನ್ನು ಮಶೀನಿನ ಬಳಿ ತನ್ನಿ.







ಈಗ ನಿಮ್ಮ ಮಶೀನಿನ ಸೆಟ್ಟಿಂಗ್ಗಳನ್ನು ಸರಿಹೊಂದಿಸಿ - ಸ್ಟಿಚ್ ಪ್ಯಾಟರ್ನ್ ಸೆಲೆಕ್ಟರ್ ಅನ್ನು A ಗೆ ತಿರುಗಿಸಿ, ಸ್ಟಿಚ್ ಲೆಂಥ್ ಅನ್ನು ಗರಿಷ್ಠಕ್ಕೆ ಇರಿಸಿ ಮತ್ತು ಥ್ರೆಡ್ ಟೆನ್ಷನ್ ಅನ್ನು 5ಕ್ಕೆ ಮಾಡಿ.



ಗುರುತಿಸಿದ ಗೆರೆಯಲ್ಲಿ ಉದ್ದಕ್ಕೂ ಎಚ್ಚರಿಕೆಯಿಂದ ಹೊಲಿಯುವುದನ್ನು ಪ್ರಾರಂಭಿಸಿ. ನೀವು ಹೊಲಿಯುತ್ತಾ ಹೋದಂತೆ ಮೃದುವಾದ ಗ್ಯಾದರ್ ಗಳು ರೂಪುಗೊಳ್ಳುವುದನ್ನು ನೋಡುತ್ತೀರಿ.


ನೀವು ಕೊನೆಯನ್ನು ತಲುಪುವವರೆಗೆ ಹೊಲಿಯಿರಿ. ಸೂಜಿಯನ್ನು ಎತ್ತಿ ಮತ್ತು ದಾರವನ್ನು ಕತ್ತರಿಸಿ. ಮುಂದಿನ ಗೆರೆಯಲ್ಲಿ ಹೊಲಿಯುವುದನ್ನು ಮುಂದುವರೆಸಿ.

ಗುರುತು ಮಾಡಿದ ಗೆರೆಗಳ ಉದ್ದಕ್ಕೂ ನಿಮ್ಮ ಬಳಿ ನಾಲ್ಕು ಸಾಲುಗಳ ಗ್ಯಾದರ್ ಗಳು ಬರುವವರೆಗೂ ಪ್ರಕ್ರಿಯೆಯನ್ನು ಪುನರಾವರ್ತಿಸಿ.





ಈಗ ನಿಮ್ಮ ಬಳಿ ಸುಂದರವಾದ ಗ್ಯಾದರ್ ಗಳಿರುವ ಒಂದು ಪದರದ ಸ್ಟೋಲ್ ಶೋ ಆಫ್ ಮಾಡುವುದಕ್ಕೆ ಸಿದ್ಧವಾಗಿದೆ. ಖಾಲಿ ಇರುವ ಅಂಚುಗಳನ್ನು ಅಲಂಕರಿಸಲು ಕೈಯಿಂದ ಹೊಲಿಯುವ ಮೂಲಕ ನೀವು ಕುಚ್ಚುಗಳನ್ನು ಹಾಕಲು ಸಹ ಆಯ್ಕೆ ಮಾಡಬಹುದು.



ಫ್ಯಾಶನ್ ಆಕ್ಸೆಸರಿಯಾದ ಸ್ಟೋಲ್ ಗಳನ್ನು ಯಾರೂ ಗಮನಿಸದೇ ಹೋಗುವುದಿಲ್ಲ - ಹಾಗೆಯೇ ಅವುಗಳು ನಿಮ್ಮ ಸೌಂದರ್ಯವನ್ನು ವರ್ಧಿಸುವ ಅಥವಾ ಗುರುತಿಸುವ ಶಕ್ತಿಯನ್ನು ಹೊಂದಿರುತ್ತವೆ. ಅವು ಯಾವುದೇ ಸಮಗ್ರತೆಗೆ ಅಂತಿಮ ಸ್ಪರ್ಶವನ್ನು ಸೇರಿಸಲು ಸಹಾಯ ಮಾಡುತ್ತವೆ ಮತ್ತು ಇದನ್ನು ಡ್ರೆಸ್ ಗಳು, ಮತ್ತು ಕೋಟ್ಗಳು, ಸ್ವೆಟರ್ಗಳು, ಜಾಕೆಟ್ಗಳು ಮತ್ತು ಸೂಟ್ಗಳೊಂದಿಗೆ ಧರಿಸಬಹುದು.